ಓ ಎಸ್ಃ 577/2014

ಡಿ ಡಬ್ಲ್ಯೂ ಃ 1

ದಿನಾಂಕಃ 27.09.2025 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 7 ರವರ ಪರ ಶ್ರೀ ಎಸ್ ಎ ಹೆಚ್ ವಕೀಲರಿಂದಃ**

ನನ್ನ ತಂದೆ ರಾಮಲಿಂಗಯ್ಯ ನವರು ಈ ದಾವೆಯಲ್ಲಿ ಸಾಕ್ಷಿ ಹೇಳಿರುವುದಿಲ್ಲ. ನನಗೆ ದಾವಾ ಸ್ವತ್ತುಗಳ ಬಗ್ಗೆ ವೈಯಕ್ತಿಕ ಮಾಹಿತಿ ಇದೆಯೋ ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿಗಳು ಸಲ್ಲಿಸಿರುವ ವಂಶವೃಕ್ಷ ಸರಿಯಾಗಿ ಇರುತ್ತದೆ. ಈ ದಾವೆ ಹಾಕಿರುವ ಜುಂಜಯ್ಯ , ನನ್ನ ತಂದೆ ಮತ್ತು ಪ್ರತಿವಾದಿ 7 ಶಿವಮ್ಮ ರವರು ಒಡಹುಟ್ಟಿದವರು ಎಂದರೆ ಸರಿ. ದಾವಾ ಸ್ವತ್ತುಗಳು ಮೂಲತಃ ನನ್ನ ತಾತನಿಂದ ಬಂದಿದ್ದು ಅದು ನನ್ನ ತಾತನ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ.

ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ರೇವಯ್ಯ ಮತ್ತು ಜುಂಜಯ್ಯ ನವರು ಮರಣ ಶಾಸನ ಮಾಡಿರುವುದಿಲ್ಲ ಎಂದರೆ ಸರಿ. ರೇವಯ್ಯ ನವರ ನಂತರ ಅವರ ಒಡಹುಟ್ಟಿದವರ ನಡುವೆ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ,ವ ವಿಭಾಗವಾಗಿರುತ್ತದೆ ಎಂದು ನುಡಿಯುತ್ತಾರೆ. ಎಲ್ಲ ಒಡಹುಟ್ಟಿದವರ ನಡುವೆ ವಿಭಾಗವಾಗಿರುತ್ತದೆ ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆಯೇ ಎಂದರೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ರಾಮಲಿಂಗಯ್ಯ, ಚಿಕ್ಕಪ್ಪ ಜುಂಜಯ್ಯ ಮತ್ತು ಪ್ರತಿವಾದಿ 7 ಶಿವಮ್ಮ ನವರ ನಡುವೆ ವಿಭಾಗವಾಗಿರುವ ದಾಖಲಾತಿಯನ್ನು ನಾನು ಹಾಜರುಪಡಿಸಿರುತ್ತೇನೆಯೇ ಎಂದರೆ ಸಾಕ್ಷಿ ನಾನು ಆ ರೀತಿಯಾದಂತಹ ವಿಭಾಗ ಆ 3 ವ್ಯಕ್ತಿಗಳ ನುಡವೆ ಆಗಿರುವುದಿಲ್ಲ, ಆದರೆ ನನ್ನ ತಂದೆ ರಾಮಲಿಂಗಯ್ಯ ಮತ್ತು ನನ್ನ ಚಿಕ್ಕಪ್ಪ ಜುಂಜಯ್ಯ ನವರ ನಡುವೆ 1975 ರಲ್ಲಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ.

ನಾನು 1977 ರಲ್ಲಿ ಹುಟ್ಟಿರುತ್ತೇನೆ. 1975 ರಲ್ಲಿ ಆದ ವಿಭಾಗದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರಲಿಲ್ಲ ಎಂದರೆ ಸಾಕ್ಷಿ ನಾನು ದಾಖಲಾತಿಗಳನ್ನು ನೋಡಿ ಮಾಹಿತಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ವಿಭಾಗವಾದ ಸಂಗತಿಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದು ಸೂಚಿಸಿದರೆ ಸಾಕ್ಷಿ ನಾನು ಆ ಸಮಯದಲ್ಲಿ ಹುಟ್ಟಿರಲಿಲ್ಲ, ಆದ್ದರಿಂದ ನನಗೆ ಅದರ ಬಗ್ಗೆ ವೈಯಕ್ತಿಕವಾದ ಮಾಹಿತಿ ಇರುವುದಿಲ್ಲ. ವಿಭಾಗವಾಗಿರುತ್ತದೆ ಎಂದು ನನ್ನ ಚಿಕ್ಕಪ್ಪ ನವರಾದ ಜುಂಜಯ್ಯ ನವರು ವಿಭಾಗದ ಬಗ್ಗೆ ನನಗೆ ಹೇಳಿರುತ್ತಾರೆ. ನನ್ನ ಚಿಕ್ಕಪ್ಪ ವಿಭಾಗವಾಗಿರುತ್ತದೆ ಎಂದು ಎಂದೂ ಹೇಳಿಲ್ಲ, ಆದಕಾರಣ ವಾದಿಗಳು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಿಭಾಗವಾಗಿದೆ ಎಂದು ತೋರಿಸಲು ನಾನು ದಾಖಲಾತಿಗಳನ್ನು ನೀಡಿದ್ದು, ಆ ದಾಖಲಾತಿಗಳಲ್ಲಿ ಎಲ್ಲ ದಾವಾ ಸ್ವತ್ತುಗಳು ಇದೆಯೋ ಇಲ್ಲವೋ ಎಂದು ನಾನು ಪರಿಶೀಲನೆ ಮಾಡಿ ತೋರಿಸುತ್ತೇನೆ. ಅದು ನಿಶಾನೆ ಡಿ 7 ರಲ್ಲಿ ಇರುತ್ತದೆ. ಸದರಿ ನಿ ಡಿ 7 ನೋಂದಣಿಯಾಗಿರುವುದಿಲ್ಲ. ವಿಭಾಗವಾದ ನಂತರ ಸದರಿ ವಿಭಾಗ ಪತ್ರದ ಪ್ರಕಾರ ಕಂದಾಯ ಇಲಾಖೆಯಲ್ಲಿ ಖಾತೆಗಳು ಬದಲಾವಣೆಯಾಗಿಲ್ಲ ಎಂದರೆ ಸಾಕ್ಷಿ ಖಾತೆಗಳು ಬದಲಾವಣೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರ ಕ್ರಮಬದ್ದವಾಗಿಲ್ಲದೇ ಇರುವ ಕಾರಣ ಯಾರು ಕಂದಾಯ ಇಲಾಖೆಯಲ್ಲಿ ಖಾತೆ ಬದಲಾವಣೆ ಮಾಡಿಸಿರುವುದಿಲ್ಲ ಎಂದರೆ ಸಾಕ್ಷಿ ಕಂದಾಯ ಇಲಾಖೆಯಲ್ಲಿ ಖಾತೆ ಬದಲಾವಣೆ ಮಾಡಿಕೊಳ್ಳಬೇಕೆಂದು ಮಾಹಿತಿ ಇಲ್ಲದೇ ಇದ್ದ ಕಾರಣ ಖಾತೆ ಬದಲಾವಣೆ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ.

ನನ್ನ ತಾತ ರೇವಯ್ಯ ನವರು 1981 ರಲ್ಲಿ ತೀರಿಕೊಂಡಿರಬಹುದು. 1975 ರಲ್ಲಿ ಆದ ವಿಭಾಗಪತ್ರದಲ್ಲಿ ನನ್ನ ತಾತ ರೇವಯ್ಯ ನವರ ಭಾಗಕ್ಕೆ ಏನು ಕೊಟ್ಟಿರುತ್ತೀರ ಎಂದು ಕೇಳಿದರೆ ಸಾಕ್ಷಿ ನನ್ನ ತಾತ ರೇವಯ್ಯ ನವರಿಗೆ 1975 ರ ವಿಭಾಗಪತ್ರದಲ್ಲಿ ಯಾವುದೇ ಭಾಗ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. 1975 ರಿಂದ 1981 ರವರೆಗೂ ಮತ್ತು ನಂತರವೂ ಕೂಡ ದಾವಾ ಸ್ವತ್ತುಗಳು ರೇವಯ್ಯ ನವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. 1975 ರಿಂದ 1981 ರ ವರೆವಿಗೂ ರೇವಯ್ಯ ನವರ ಹೆಸರಿನಲ್ಲಿ ದಾವಾ ಸ್ವತ್ತುಗಳು ಇರಲಿಲ್ಲ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಪಹಣಿಗಳನ್ನು ಕೊಡುತ್ತೇನೆ.ದಾವಾ ಸ್ವತ್ತುಗಳು ರೇವಯ್ಯ ನವರ ಹೆಸರಿನಲ್ಲಿ ಮುಂದುವರೆಸಿಕೊಂಡು 1975 ರಿಂದ 1981 ರ ವರೆವಿಗೂ ಬಂದಿದ್ದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗದ ಮೂಲಕ ನಮ್ಮ ಭಾಗಕ್ಕೆ ಬಂದಿರುವ ಜಾಗಗಳನ್ನು ಗುರುತಿಸಲು ಯಾವುದಾದರೂ ಕಂದಾಯ ದಾಖಲಾತಿಗಳು ಇವೆಯೋ ಎಂದರೆ ಸಾಕ್ಷಿ ಮಾಹಿತಿ ಇರಲಿಲ್ಲ, ಅವರು ಭಾಗ ಮಾಡಿಕೊಂಡು ಹಾಗೆಯೇ ಇದ್ದರು ಎಂದು ನುಡಿಯುತ್ತಾರೆ. ಯಾವುದೇ ವಿಭಾಗ ಮಾಡಿಕೊಂಡಿಲ್ಲ, ಆದ್ದರಿಂದ ರೇವಯ್ಯ ನವರ ಹೆಸರಿನಲ್ಲಿ ದಾಖಲಾತಿಗಳು ಮುಂದುವರೆದು ಬರುತ್ತಿತ್ತು ಎಂದರೆ ಸರಿಯಲ್ಲ. ಯಾವ ಹಂತದಲ್ಲಿ ರೇವಯ್ಯ ನವರ ಹೆಸರು ಬದಲಾವಣೆ ಆಗಿ ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪನ ಹೆಸರು ಖಾತೆ ಪಹಣಿಗಳಲ್ಲಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ರೇವಯ್ಯ ನವರ ಆಸ್ತಿ ಯಾವ ದಿನವೂ ವಿಭಾಗವಾಗಿರುವುದಿಲ್ಲ, ಅವರು ತೀರಿಕೊಂಡ ನಂತರವೂ ಹಾಗೆಯೇ ಒಟ್ಟು ಕುಟುಂಬದ ಆಸ್ತಿಯಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ತಂದೆ ಹಿರಿಯ ಮಗನಾಗಿ ಹಾಗೂ ಕರ್ತಾ ಆಗಿ ಎಲ್ಲ ಸ್ವತ್ತುಗಳನ್ನು ನೋಡಿಕೊಂಡು ಬರುತ್ತಿದ್ದರು ಎಂದರೆ ಸರಿ. ನನ್ನ ತಂದೆ ಕರ್ತಾ ಆಗಿ ಎಲ್ಲರನ್ನು ಸಮಭಾವದಿಂದ ನೋಡಿಕೊಳ್ಳುತ್ತಿರಲಿಲ್ಲ ಆದ್ದರಿಂದ ವಾದಿಗಳು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು, ಹಾಗಿದ್ದರೆ ವಾದಿಗಳು ಯಾವ ದಿನವೋ ಈ ದಾವೆಯನ್ನು ವಿಭಾಗ ಕೇಳಿ ಹೂಡುತ್ತಿದ್ದರು ಎಂದು ನುಡಿಯುತ್ತಾರೆ. ರೇವಯ್ಯ ನವರು ಅವರ ಜೀವಿತ ಕಾಲದಲ್ಲಿ ಯಾವುದೇ ವಿಲ್ ಮತ್ತು ದಾನಪತ್ರವನ್ನು ಮಾಡಿರಲಿಲ್ಲ ಎಂದರೆ ಸರಿ. ರೇವಯ್ಯ ನವರು ಯಾವುದೇ ವಿಲ್ ಮತ್ತು ದಾನಪತ್ರವನ್ನು ಮಾಡದೇ ತೀರಿಕೊಂಡ ಕಾರಣ ಜುಂಜಯ್ಯ ನನ್ನ ತಂದೆ ರಾಮಲಿಂಗಯ್ಯ ಮತ್ತು ಪ್ರತಿವಾದಿ 7 ಶಿವಮ್ಮ ನವರಿಗೆ ಸಮವಾದ ಭಾಗ ಕೊಡಬೇಕು ಮತ್ತು ಹಕ್ಕು ಬರುತ್ತದೆ ಎಂದರೆ ಸಾಕ್ಷಿ ಹಕ್ಕು ಬರುತ್ತದೆ , ಆದರೆ ಪ್ರತಿವಾದಿ 7 ರವರ ಮದುವೆಯ ಸಮಯದಲ್ಲಿ ಅವರಿಗೆ ಮದುವೆಯ ಖರ್ಚು ಮತ್ತು ಅವರ ಕಷ್ಟ ಸುಖವನ್ನು ನೋಡಿಕೊಂಡಿರುವ ಕಾರಣ ಪ್ರತಿವಾದಿ 7 ರವರಿಗೆ ಭಾಗ ಬರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಕರ್ತಾ ಆದ ಕಾರಣ ಅವರ ಹೆಸರಿಗೆ ಕುಟುಂಬದ ಸ್ವತ್ತುಗಳ ಖಾತೆಯನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು. ದಾವಾ ಸ್ವತ್ತುಗಳು ಯಾವ ಕಾರಣಕ್ಕಾಗಿ ನನ್ನ ತಂದೆಯ ಹೆಸರಿಗೆ ಬಂದಿದೆ ಎಂದರೆ ಸಾಕ್ಷಿ ನನ್ನ ತಂದೆ ಒಬ್ಬರ ಹೆಸರಿಗೆ ಯಾವ ದಿನವೂ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿಯಾಗಿರುವಂತಹ ದಾವಾ ಸ್ವತ್ತುಗಳಿಗೆ ಎಲ್ಲ ಕುಟುಂಬ ಸದಸ್ಯರು ಹಕ್ಕುದಾರರಾಗಿರುತ್ತಾರೆ ಎಂದರೆ ಸಾಕ್ಷಿ ಹೆಣ್ಣು ಮಕ್ಕಳು ಸೇರಿ ರಾಮಲಿಂಗಯ್ಯ ಮತ್ತು ಜುಂಜಯ್ಯ ನವರ ನಡುವೆ ಮಾತ್ರ ಆಸ್ತಿ ಭಾಗವಾಗಲಿ ಎಂದು ಭಾಗ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಯಾರು ಭಾಗ ಮಾಡಿಸಿರುತ್ತಾರೆ ಎಂದರೆ ಹೆಣ್ಣು ಮಕ್ಕಳು ಮತ್ತು ಊರಿನವರು ಸೇರಿ ಭಾಗ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಹೆಣ್ಣು ಮಕ್ಕಳು ಸಹ ಊರಿನವರ ಸಮಕ್ಷಮ ಅವರ ನಡುವೆ ಭಾಗವಾಗಲಿ ನಮಗೆ ಭಾಗ ಬೇಡ ಎಂದು ಒಪ್ಪಿಗೆ ಪತ್ರವನ್ನು ಕೊಟ್ಟಿರುತ್ತಾರಾ ಎಂದರೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬ ಸ್ವತ್ತುಗಳು ಭಾಗ ಆಗಿರುವುದಿಲ್ಲ ಮತ್ತು ವಿಭಾಗ ಪತ್ರದ ಬರಹಗಾರರನ್ನು ಕೂಡ ನಾನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಶಾನುಬೋಗರು ಬರೆದಿರುವ ವಿಭಾಗ ಪತ್ರ

ಆಗಿರುತ್ತದೆ, ಅವರು ಬದುಕಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಕರ್ತಾ ಆಗಿದ್ದ ಕಾರಣಕ್ಕೆ ಎಲ್ಲ ವ್ಯವಹಾರಗಳನ್ನು ನೋಡುತ್ತಿದ್ದರು, ಆ ಸಮಯದಲ್ಲಿ ವಾದಿಗೆ ಗೊತ್ತಿಲ್ಲದೇ ಅವರ ಸಹಿಯನ್ನು ಸದರಿ ತಪ್ಪು ಮಾಹಿತಿ ಒದಗಿಸಿ ಸಹಿ ಪಡೆಯಲಾಗಿರುತ್ತದೆ ಎಂದರೆ ಸುಳ್ಳು.

ವಿಭಾಗಪತ್ರದಲ್ಲಿ ತೋರಿಸಿರುವ ಸ್ವತ್ತುಗಳಿಗಿಂತ ಹೆಚ್ಚಿ ನ ಸ್ವತ್ತುಗಳು ದಾವಾ ಸ್ವತ್ತುಗಳಲ್ಲಿ ಇರುತ್ತದೆ ಮತ್ತು ವಾದಿಗೆ ಸೇರಿದ ಕೆಲವು ಪ್ರತ್ಯೇಕ ಸ್ವತ್ತುಗಳು ಕೂಡ ಇರುತ್ತವೆ ಎಂದರೆ ಸಾಕ್ಷಿ ಹೆಚ್ಚು ಸ್ವತ್ತುಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ರಾಮಲಿಂಗಯ್ಯ, ಜುಂಜಯ್ಯ ಮತ್ತು ಎಲ್ಲರಿಗೂ ಸೇರಿದ ಸ್ವತ್ತುಗಳಾಗಿದ್ದು, ಜುಂಜಯ್ಯ ನವರು ಅವರಿಗೆ ಹೋದ ಸ್ವತ್ತುಗಳನ್ನು ಅವರು ಮಾರಾಟ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮಾರಾಟ ಮಾಡಿರುವುದಕ್ಕೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

ನಿಡಿ 6 ವಾದಿ ನರಸಿಂಹಯ್ಯ ನವರಿಗೆ ಬರೆದುಕೊಟ್ಟಿರುವ ದಾಖಲಾತಿಯಾಗಿರುತ್ತದೆ. ನಿಡಿ 6 ನೋಂದಣಿಯಾಗಿರುವುದಿಲ್ಲ. ನಿಡಿ 6 ನೋಂದಣಿಯಾಗದೇ ಇರುವ ಕಾರಣ ಯಾವುದೇ ಹಕ್ಕುಗಳು ಯಾರಿಗೂ ಹೋಗುವುದಿಲ್ಲ ಎಂದರೆ ಸಾಕ್ಷಿ ನಿಡಿ 6 ನೋಂದಣಿ ಆಗಿರುವ ದಾಖಲಾತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿ ಡಿ 6 ರಲ್ಲಿ ತೋರಿಸಲಾಗಿರುವ ಸ್ವತ್ತು ನರಸಿಂಹಯ್ಯ ನವರ ಸ್ವತ್ತಾಗಿದ್ದು, ರಾಮಲಿಂಗಯ್ಯ ನವರಿಗೆ ಸದರಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲಎಂದರೆ ಸಾಕ್ಷಿ ರಾಮಲಿಂಗಯ್ಯ ನವರಿಗೆ ಸದರಿ ನಿ ಡಿ 6 ರಲ್ಲಿ ತೋರಿಸಿರುವ ಸ್ವತ್ತಿನಲ್ಲಿ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ.

ನಿ ಡಿ 6 ನ್ನು ಬರೆದ ಬರಹಗಾರರನ್ನು ನಾನು ಸಾಕ್ಷಿ ವಿಚಾರಣೆ ಮಾಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿ ಡಿ 6 ರಲ್ಲಿ ಹೇಳಲಾಗಿರುವ ವ್ಯಕ್ತಿ ಯಾರು ತೀರಿಕೊಂಡಿರುತ್ತಾರೆ ಅವರ ಹೆಸರು ಹೇಳಿ ಎಂದರೆ ಚನ್ನಪ್ಪ , ಚಿಕ್ಕ ಹೆಂಜಯ್ಯ ಎಂದು ನುಡಿಯುತ್ತಾರೆ. ಚಿಕ್ಕ ಹೆಂಜಯ್ಯ ನವರು ತೀರಿಕೊಂಡು ಸುಮಾರು 15 ವರ್ಷಗಳಾಗಿರಬಹುದು. ನಿ ಡಿ 6 ರಲ್ಲಿ ಸಾಕ್ಷಿ ಹಾಕಿರುವ ಚನ್ನಪ್ಪ , ಚಿಕ್ಕ ಹೆಂಜಯ್ಯ ಸಾಕ್ಷಿದಾರರು ಆಗಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜುಂಜಯ್ಯ ಮತ್ತು ಶಿವಮ್ಮ ನವರಿಗೆ ಕೊಡಬೇಕಾಗಿರುವ ಭಾಗವನ್ನು ಈ ದಿನದವರೆವಿಗೂ ನಾವು ಕೊಟ್ಟಿಲ್ಲ ಎಂದರೆ ಸುಳ್ಳು. ಶಿವಮ್ಮ ನವರಿಗೆ ಯಾವುದೇ ಸ್ವತ್ತುಗಳನ್ನು ಈ ಹಿಂದೆ ಹೇಳಿದ ಮದುವೆ ಮತ್ತು ಕಷ್ಟ ಸುಖಗಳಲ್ಲಿ ನಾವು ಭಾಗಿಯಾಗಿದ್ದ ಕಾರಣ ಅವರಿಗೆ ಭಾಗವನ್ನು ಕೊಟ್ಟಿಲ್ಲ, ಬದಲಾಗಿ ಜುಂಜಯ್ಯ ನವರಿಗೆ ಕೊಡಬೇಕಾದ ಭಾಗವನ್ನು ಕೊಟ್ಟಿರುತ್ತೇವೆ .

ಜುಂಜಯ್ಯ ನವರಿಗೆ ಯಾವ ದಾವಾ ಸ್ವತ್ತುಗಳಲ್ಲಿ ಭಾಗ ನೀಡಲಾಗಿರುತ್ತದೆ ಎಂದು ಕೇಳಿದರೆ ಸಾಕ್ಷಿ ಐಟಂ ನಂಬರ್ 1 ರಿಂದ 3 , ಸ.ನಂ. 110 , ಸ.ನಂ. 69 ಮತ್ತು ಸ.ನಂ. 126 ನಮ್ಮ ಕುಟುಂಬದ ಸ್ವತ್ತಾಗಿರುವುದಿಲ್ಲ. ಸಾಕ್ಷಿ ಮುಂದುವರೆದ ಜುಂಜಯ್ಯ ನವರಿಗೆ ಸ.ನಂ. 110 /12 , ಸ.ನಂ. 126/4 , ಸ.ನಂ. 126/16 ಮತ್ತು ಸ.ನಂ. 69/1 ರಲ್ಲಿ ಭಾಗ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿ ದಾವಾ ಐಟಂ ನಂಬರ್ 1 ರಿಂದ 3 ರಲ್ಲಿ ಸ್ವಾಧೀನದಲ್ಲಿರುತ್ತಾರಾ ಎಂದರೆ ಇರುವುದಿಲ್ಲ.

ದಾವಾ ಐಟಂ ನಂಬರ್ 1 ರಿಂದ 3 ರಲ್ಲಿ ನಾನು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ಅದರಲ್ಲಿ ನಾವು ಸ್ವಾದೀನದಲ್ಲಿರುವುದಿಲ್ಲ ಎಂದು **ನುಡಿಯುತ್ತಾರೆ.**

**ಮುಂದುವರೆದ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**